# ಶಕ್ತಿಪೂಜೆ



ಸ್ತ್ರೀಯರ ಉದ್ಧಾರ ಅತ್ಯಂತ ಅವಶ್ಯಕ. ಹಿಂದೆ ಅಂತಹ ಆದರ್ಶ ನಾರಿಯರಿಗೆ ಬ್ರಹ್ಮಜ್ಞಾನಕ್ಕೆ ಹಕ್ಕಿದ್ದರೆ, ಈಗ ಏತಕ್ಕೆ ಅದೇ ಹಕ್ಕು ಇರಬಾರದು? ಹಿಂದೆ ಯಾವುದು ಸಾಧ್ಯವಾಗಿತ್ತೋ ಅದು ಈಗಲೂ ಸಾಧ್ಯವಾಗಬೇಕು. ಇತಿಹಾಸದಲ್ಲಿ ಹಿಂದಿನಂತೆ ಮುಂದೆಯೂ ಆಗುವುದನ್ನು ನೋಡುವೆವು.

ನೀವು ಯಾವಾಗಲೂ ಸ್ತ್ರೀಯರನ್ನು ದೂರುತ್ತೀರಿ. ಆದರೆ ನೀವು ಅವರ ಮೇಲ್ಮೆಗೆ ಏನು ಮಾಡಿದ್ದೀರಿ? ನೀವು ಹಲವಾರು ಸ್ಮೃತಿಶಾಸ್ತ್ರಗಳನ್ನು ಬರೆದು ಅವರಿಗೆ ಅಷ್ಟದಿಗ್ಬಂಧನಗಳನ್ನು ಒಡ್ಡಿರುವಿರಿ. ಹೆಂಗಸರನ್ನು ಬರೀ ಮಕ್ಕಳನ್ನು ತಯಾರುಮಾಡುವ ಯಂತ್ರಗಳನ್ನಾಗಿ ಮಾಡಿದ್ದಾರೆ, ಗಂಡಸರು. ಯಾವಾಗಲೂ ಇನ್ನೊಬ್ಬರನ್ನು ಆಶ್ರಯಿಸಿಕೊಂಡು, ಯಾವಾಗಲೂ ಪರರನ್ನು ನೆಚ್ಚಿಕೊಂಡಿರುವಂತೆ ಹೆಂಗಸರನ್ನು ಮಾಡಿರುವೆವು. ಆದಕಾರಣವೇ ಪ್ರಪಂಚದಲ್ಲಿ ಸ್ವಲ್ಪ ಕಷ್ಟ ಮತ್ತು ಅಪಾಯ ಬಂದರೂ ಅವಳಿಗೆ ಸುಮ್ಮನೆ ಅಳುವುದೊಂದೇ ಗೊತ್ತಿರುವುದು.

.....ಮನು, "ಎಲ್ಲಿ ನಾರಿಯರನ್ನು ಗೌರವಿಸುವರೊ ಅಲ್ಲಿ ದೇವತೆಗಳು ಸುಪ್ರೀತರಾಗುವರು, ಎಲ್ಲಿ ಅವರನ್ನು ಅಗೌರವದಿಂದ ಕಾಣುವರೊ ಅಲ್ಲಿ ಪುರುಷನು ಮಾಡಿದ ಸತ್ಕರ್ಮಗಳೆಲ್ಲ ನಿಷ್ಫಲವಾಗುವುವು" ಎಂದು ಸಾರುತ್ತಾನೆ. ಯಾವ ಮನೆಯಲ್ಲೇ ಆಗಲಿ, ದೇಶದಲ್ಲೇ ಆಗಲಿ ಸ್ತ್ರೀಯರನ್ನು ಗೌರವದಿಂದ ನೋಡುವುದಿಲ್ಲವೊ, ಎಲ್ಲಿ ಸ್ತ್ರೀಯರು ನೋವಿನ ಜೀವನವನ್ನು ಬಾಳುವರೊ ಅಲ್ಲಿ ಪುರುಷರಿಗೆ ಶ್ರೇಯಸ್ಸಾಗಲಾರದು.

ನಿಜವಾದ ಶಕ್ತಿಯ ಉಪಾಸಕ ಯಾರು ಗೊತ್ತೇ? ಯಾರು ದೇವರನ್ನು ಸರ್ವವ್ಯಾಪಿಯಾದ ಚೈತನ್ಯವೆಂದು ಭಾವಿಸುವನೊ ಮತ್ತು ಸ್ತ್ರೀಯರಲ್ಲಿ ಅದರ ಆವಿರ್ಭಾವವನ್ನು ನೋಡುವನೊ ಅವನೇ ನಿಜವಾದ ಶಕ್ತಿ ಆರಾಧಕ. ನಿಮ್ಮ ಸ್ತ್ರೀಯರ ಸ್ಥಿತಿಯನ್ನು ಉತ್ತಮಪಡಿಸಬಲ್ಲಿರಾ? ಆಗ ನಿಮಗೆ ಶ್ರೇಯಸ್ಕರವಾಗುವುದು. ಇಲ್ಲದೆ ಇದ್ದರೆ ನೀವು ಈಗ ಇರುವಂತೆಯೇ ಹಿಂದೆಯೇ ಉಳಿಯುವಿರಿ. ನಮ್ಮ ಸ್ತ್ರೀಯರನ್ನು ಮೇಲೆತ್ತಬೇಕು. ಜನಸಾಮಾನ್ಯರನ್ನು ಮೊದಲು ಜಾಗೃತಗೊಳಿಸಬೇಕು. ಆಗ ಮಾತ್ರ ನಮ್ಮ ಭರತಖಂಡಕ್ಕೆ ಮಂಗಳವಾಗಬಹುದು. ಸ್ತ್ರೀಯರನ್ನು ಉದ್ಧರಿಸಿದರೆ ಆಗ ಅವರ ಮಕ್ಕಳು ತಮ್ಮ ಸತ್ಕರ್ಮಗಳಿಂದ ನಮ್ಮ ದೇಶದ ಮಹಿಮೆಯನ್ನು ಹೆಚ್ಚಿಸುವರು. ಆಗ ನಮ್ಮಲ್ಲಿ ಸಂಸ್ಕೃತಿ, ಜ್ಞಾನ, ಶಕ್ತಿ ಮತ್ತು ಭಕ್ತಿಗಳು ವ್ಯಕ್ತವಾಗುವುವು.

ಸ್ತ್ರೀಯರು ಆದಿಶಕ್ತಿಯ ಆವಿರ್ಭಾವ. ಪುರುಷ ತನ್ನ ಇಂದ್ರಿಯಗಳಿಗೆ ಪ್ರಿಯವಾದ ಸ್ತ್ರೀಯರ ಬಾಹ್ಯ ಆಕರ್ಷಣೆಗೆ ಉನ್ಮತ್ತನಾಗಿ ಹೋಗಿರುವನು. ಆದರೆ ಅಂತರಾಳದಲ್ಲಿರುವ ಜ್ಞಾನ ಭಕ್ತಿ ವಿವೇಕ ವೈರಾಗ್ಯ ಇವುಗಳನ್ನು ಅರಿತರೆ ಪುರುಷ ಸರ್ವಜ್ಞನಾಗುವನು, ಬ್ರಹ್ಮಜ್ಞಾನಿಯಾಗುವನು. ಅವನು ಹಿಡಿದ ಯಾವ ಕೆಲಸವೂ ವಿಫಲವಾಗುವುದಿಲ್ಲ. "ಅವಳು ತೃಪ್ತಳಾಗಿ, ಅನುಗ್ರಹಿಸಿದರೆ ಮನುಷ್ಯ ಮುಕ್ತಿಯನ್ನು ಪಡೆಯುತ್ತಾನೆ" (ದುರ್ಗಾ ಸಪ್ತಶತಿ). ತಪಸ್ಸು ಮತ್ತು ಪೂಜೆಯಿಂದ ಜಗನ್ಮಾತೆಯನ್ನು ತೃಪ್ತಿಪಡಿಸಿದಲ್ಲದೆ ಬ್ರಹ್ಮ ವಿಷ್ಣುಗಳಿಗೇ ಅವಳ ಆಕರ್ಷಣೆಯಿಂದ ಪಾರಾಗುವ ಸಂಭವವಿಲ್ಲ. ಸ್ತ್ರೀಯರಲ್ಲಿರುವ ಬ್ರಹ್ಮತತ್ತ್ವವು ವ್ಯಕ್ತವಾಗುವುದಕ್ಕಾಗಿ, ದೇವಿಯ ಪೂಜೆಗಾಗಿ, ನಾನು ಸ್ತ್ರೀಮಠವನ್ನು ಸ್ಥಾಪಿಸುತ್ತೇನೆ.

ವಿದ್ಯಾರ್ಥಿನಿಯರು ಮಠದಲ್ಲಿ ಇರುವ ತನಕ ಬ್ರಹ್ಮಚರ್ಯ ವ್ರತವನ್ನು ಪಾಲಿಸಬೇಕು. ಇದೇ ಮಠದ ಮೂಲ ಆದರ್ಶ. ಈ ಮಠದ ವಿದ್ಯಾರ್ಥಿನಿಯರಿಗೆ ತಪಸ್ಸು, ತ್ಯಾಗ, ಇಂದ್ರಿಯನಿಗ್ರಹವೇ ಆದರ್ಶವಾಗಬೇಕು... ಈ ದೇಶದ ಸ್ತ್ರೀಯರ ಶೀಲವನ್ನು ಇಂತಹ ಆದರ್ಶದ ಮೂಲಕ ರೂಪಿಸಿದರೆ ಮಾತ್ರ ಸೀತಾ, ಸಾವಿತ್ರಿ, ಗಾರ್ಗಿ ಮುಂತಾದ ಆದರ್ಶ ವ್ಯಕ್ತಿಗಳು ಭರತಖಂಡದಲ್ಲಿ ಪುನಃ ಉದಯಿಸಬಹುದು. •

ಧಾರಾವಾಹಿ

# ಕುಂಭಮೇಳ- ವಿಶ್ವದ ಅತಿದೊಡ್ಡ ಉತ್ಸವ

ಸ್ವಾಮಿ ಆತ್ಮಶ್ರದ್ಧಾನಂದ


ಕನ್‌ಖಲ್‌ನ ರಾಮಕೃಷ್ಣ ಮಿಷನ್ ಸೇವಾಶ್ರಮದ ಮಂದಿರ

ಗಂಗಾ ನಾಲೆಯ ಪಶ್ಚಿಮ ದಂಡೆಯ ಮೇಲೆ ಇರುವ 'ಕನ್‌ಖಲ್' (ಕೆಟ್ಟವನೂ ಒಳ್ಳೆಯವನಾಗುವ ಸ್ಥಳ ಎಂದರ್ಥ) ಹರಿದ್ವಾರದ ಅವಳಿ ನಗರವಾಗಿದೆ. ಪುರಾಣಪ್ರಸಿದ್ಧ ಸ್ಥಳ ಇದು. ದಕ್ಷ ಪ್ರಜಾಪತಿಯು ಇಲ್ಲಿ ಒಂದು ಯಜ್ಞಮಾಡಿದನು. ಅಳಿಯನಾದ ಶಿವನಿಗೇ ಅವನು ಆಹ್ವಾನವನ್ನು ನೀಡಿರಲಿಲ್ಲ. ಇದರಿಂದ ದಕ್ಷನ ಮಗಳಾದ ಸತೀದೇವಿಗೆ ಬಹಳ ದುಃಖ ವಾಯಿತು. ಈ ಅಪಮಾನವನ್ನು ತಾಳಲಾರದೆ ದೇವಿಯು ದಕ್ಷನ ಯಜ್ಞಕುಂಡಕ್ಕೆ ಹಾರಿ ಪ್ರಾಣಾರ್ಪಣೆ ಮಾಡಿಕೊಂಡಳು. ಇದರಿಂದ ಕ್ರೋಧಗೊಂಡ ಶಿವನು, ಯಜ್ಞಸ್ಥಳಕ್ಕೆ ಬಂದು, ಸತಿಯ ಅವಶೇಷಗಳನ್ನು ಎತ್ತಿ, ಭೂಮಿಯ ಉದ್ದಗಲಕ್ಕೂ ಹರಡಿದ. ಇವು ಬಿದ್ದ ಜಾಗಗಳು ಶಕ್ತಿಪೀಠಗಳೆಂದು ಪ್ರಖ್ಯಾತವಾಗಿವೆ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳ ವಿವಿಧ ಕಡೆ ಒಟ್ಟು ೫೧ ಶಕ್ತಿಪೀಠಗಳಿವೆ. ದಕ್ಷನ ಯಜ್ಞ ನಡೆದ ಸ್ಥಳವೇ ಈ ಕನ್‌ಖಲ್. ಆ ಜಾಗದಲ್ಲಿ ದಕ್ಷ ಪ್ರಜಾಪತಿಯ ಮಂದಿರವಿದೆ.

'ರಾಮಕೃಷ್ಣ ಮಿಷನ್ ಸೇವಾಶ್ರಮ' ದೆಹಲಿ–ಹರಿದ್ವಾರ ಹೆದ್ದಾರಿಯಲ್ಲಿ, ಕನ್‌ಖಲ್‌ನ ಗಂಗಾ ನಾಲೆಯ ಪಕ್ಕದಲ್ಲಿ ಇದೆ. ಸೇವಾಶ್ರಮದಲ್ಲಿ ೧೫೦ ಹಾಸಿಗೆಗಳ ದೊಡ್ಡ ಆಸ್ಪತ್ರೆ ಇದೆ. ಅಲ್ಲಿ ಆಧುನಿಕ ವೈದ್ಯಕೀಯ ಸೌಲಭ್ಯಗಳು ಲಭ್ಯ. ಇಲ್ಲಿ ವಿವಿಧ ಸಂಪ್ರದಾಯ ಮತ್ತು ಪಂಥಗಳ ಸಾಧುಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಇತರ ರೋಗಿಗಳಿಗೆ ಬಹಳ ಕಡಮೆ ಖರ್ಚಿನಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುವುದು. ಆಶ್ರಮದಲ್ಲಿ ಶ್ರೀರಾಮಕೃಷ್ಣರ ಮಂದಿರವೊಂದಿದೆ. ಸ್ವಾಮಿ ವಿವೇಕಾನಂದರ ನೆನಪಿನಲ್ಲಿ, ಆಶ್ರಮದ ಹಿಂಭಾಗದಲ್ಲಿರುವ ಕಾಲುವೆಯ ಘಟ್ಟಕ್ಕೆ 'ವಿವೇಕಾನಂದ ಘಾಟ್' ಎಂದು ಹೆಸರಿಡಲಾಗಿದೆ.

ಗಂಗಾನದಿಯ ದಡದಲ್ಲಿ ಅನೇಕ ದೇವಾಲಯಗಳು, ಆಶ್ರಮಗಳು ಇವೆ. ಹಾಗೆಯೇ ಸಾವಿರಾರು ಭಕ್ತರು ದಿನವಿಡೀ ಸ್ನಾನ ಮಾಡುವ ನದೀಘಟ್ಟಗಳೂ ಇವೆ. ಸಂಜೆಯಾಗುತ್ತಿದ್ದಂತೆ ನೂರಾರು ಭಕ್ತರು, ಶಂಖಜಾಗಟೆಗಳ ನಾದದ ಹಿನ್ನೆಲೆಯಲ್ಲಿ ಗಂಗಾಮಾತೆಗೆ ಆರತಿಯನ್ನು ಮಾಡುತ್ತಾರೆ. ಇವುಗಳಲ್ಲಿ, 'ಹರೀ ಕೀ ಪೌರಿ'ಯಲ್ಲಿ ಮಾಡುವ ಆರತಿಯೇ ಪ್ರಮುಖವಾದುದು. ಈ ಸಮಯದಲ್ಲಿ ಭಜನೆ ಮಾಡುತ್ತ, ತುಪ್ಪ ಮತ್ತು ಎಣ್ಣೆಯ ಹಣತೆಗಳನ್ನು ಹೂವುಗಳಿಂದ ಅಲಂಕರಿಸಿ, ಎಲೆಗಳ ಮೇಲೆ ಇಟ್ಟು, ಗಂಗೆಯಲ್ಲಿ ತೇಲಿಬಿಡುತ್ತಾರೆ. ಆಗ ಸುತ್ತಲೂ ಪಸರಿಸುವ ಗಂಧದಕಡ್ಡಿಗಳ ಸುವಾಸನೆಯು ದೈವೀ ಅನುಭವವನ್ನು ನೀಡು ತ್ತದೆ. ಸಿ.ಡಿ., ಕ್ಯಾಸೆಟ್, ಧಾರ್ಮಿಕ ಪುಸ್ತಕಗಳು, ಮಣಿಗಳು ಮತ್ತಿತರ ಅಗತ್ಯ ಧಾರ್ಮಿಕ ಪರಿಕರಗಳನ್ನು ಮಾರಾಟಮಾಡುವ ವ್ಯಾಪಾರಿಗಳು, ಹೆಜ್ಜೆಹೆಜ್ಜೆಗೆ ಸಿಕ್ಕುವ ಭಿಕ್ಷುಕರು, ಜನಜಂಗುಳಿಯ ಮಧ್ಯೆ ನುಸುಳಿಕೊಂಡಿರುವ ಕಳ್ಳರು – ಇವರೆಲ್ಲರೂ ತೀರ್ಥ ಯಾತ್ರೆಯ ಆರ್ಥಿಕ ವ್ಯವಸ್ಥೆಯ ಅಂಗವಾಗಿ ಇದ್ದು, ಸೊಗಸಾಗಿ ತಮ್ಮ ವಹಿವಾಟು ನಡೆಸುತ್ತಾರೆ.

## ಹಿಂದೂ ಸಂನ್ಯಾಸ ಸಂಪ್ರದಾಯಗಳು

ಸಂನ್ಯಾಸ ಪದ್ಧತಿಯು ಮಾನವ ನಾಗರಿಕತೆಯಷ್ಟೇ ಪುರಾತನವಾಗಿದೆ. ಉಪನಿಷತ್ತುಗಳು ಮತ್ತು ಪುರಾಣಗಳಲ್ಲಿ ಇದರ ಬಗ್ಗೆ ಪ್ರಸ್ತಾಪ ಬರುತ್ತದೆ. ಎಂಟನೆಯ ಶತಮಾನದಲ್ಲಿ ಶ್ರೀಶಂಕರಾಚಾರ್ಯರು ವೈದಿಕ ಸಂನ್ಯಾಸ ಪದ್ಧತಿಯನ್ನು ಪರಿಷ್ಕರಿಸಿ, 'ದಶನಾಮಿ ಸಂಪ್ರದಾಯ'ವನ್ನಾಗಿ ಚಲಾವಣೆಗೆ ತಂದರು. ಇದರಲ್ಲಿ ಹತ್ತು ಸಂಪ್ರದಾಯಗಳಿವೆ. ಪ್ರತಿಯೊಂದು ಸಂಪ್ರದಾಯದ ಸಂನ್ಯಾಸದ ಹೆಸರಿಗೂ ಪುರಿ, ತೀರ್ಥ, ಇತ್ಯಾದಿ ಉಪಾಧಿಗಳನ್ನು ಸೇರಿಸಲಾಗುತ್ತದೆ. ಪ್ರತಿ ಸಂಪ್ರದಾಯಕ್ಕೂ ಮಹಾವಾಕ್ಯ, ಉಪನಿಷತ್ತು, ಇಷ್ಟದೇವತೆಗಳು ನಿಗದಿತ ವಾಗಿರುತ್ತವೆ. ಇದನ್ನು ಬಳಕೆಗೆ ತಂದವರು ಶ್ರೀಶಂಕರಾ ಚಾರ್ಯರು. ಅವರು ಸ್ಥಾಪಿಸಿದ ಮಠಗಳಲ್ಲಿ ಈ ಕೆಳಗಿನ ಹತ್ತು ಹೆಸರುಗಳು ಪ್ರಚಲಿತವಾಗಿವೆ: **ಸರಸ್ವತಿ, ತೀರ್ಥ, ಅರಣ್ಯ, ಭಾರತಿ, ಆಶ್ರಮ, ಗಿರಿ, ಪರ್ವತ, ಸಾಗರ, ವನ** ಮತ್ತು **ಪುರಿ**. ದಶನಾಮಿ ಸಂಪ್ರದಾಯಕ್ಕೆ ಸೇರಿದ ಸಂನ್ಯಾಸಿಗಳು ಆದಿಶಂಕರರು ವಿಧಿಸಿದ ಸಾಧನೆಗಳು ಮತ್ತು ಸಂಪ್ರದಾಯಗಳನ್ನು ಪಾಲಿಸುತ್ತಾರೆ.

ಇದಲ್ಲದೆ, ಈ ಮುಖ್ಯ ಸಂಪ್ರದಾಯಗಳಿಂದ ಭಿನ್ನವಾದ ಸಂನ್ಯಾಸಿ ಪಂಥಗಳೂ ಇವೆ. ಈ ಪಂಥಗಳ ನಂಬಿಕೆ ಮತ್ತು